ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	21
2	ಸದಸ್ಯರ ಹೆಸರು	:	ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
3	ಉತ್ತರಿಸುವ ದಿನಾಂಕ	:	16-09-2021
4	ಉತ್ತರಿಸುವವರು	:	ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದ ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಹಳೆಯ ಕಾರ್ಪೋರೇಷನ್ ಕಟ್ಟಡವನ್ನು ಕೆಡವಿ ನೂತನ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ	ಬಂದಿದ್ದಲ್ಲಿ ನೂತನ ಕಟ್ಟಡ ಕಾಮಗಾರಿಯ ಅಂದಾಜು ಮೌಲ್ಯವೆಷ್ಟು; ಗುತ್ತಿಗೆ ಹೊಣೆ ಹೊತ್ತಿರುವ ಕಂಪನಿ ಯಾವುದು; ನಿರ್ಧಿಷ್ಟಪಡಿಸಿರುವ ಕಾಮಮಿತಿಯೇನು;	ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದಲ್ಲಿರುವ ಹಳೆಯ ಕಾರ್ಪೋರೇಷನ್ ಕಟ್ಟಡವನ್ನು ಕೆಡವಿ ನೂತನವಾಗಿ ಅಂದಾಜು ಮೊತ್ತ ರೂ.1500.00 ಲಕ್ಷಗಳಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣ ಹಾಗೂ ಆಟದ ಮೈದಾನ ಅಭಿವೃದ್ಧಿ ಪಡಿಸಲು ಉದ್ದೇಶಿಸಿದ್ದು, ಪ್ಯಾಕೇಜ್-6ರ ಸದರಿ ಕಾಮಗಾರಿಗಾಗಿ ಗುತ್ತಿಗೆಯನ್ನು ಶ್ರೀ. ಭುವನೇಶ್ವರಿ ಕನ್ಸ್ಟ್ರಕ್ಷನ್, ಬಿಎಸ್‌ಕೆ 1ನೇ ಹಂತ 2ನೇ ಬ್ಲಾಕ್, ಬೆಂಗಳೂರುರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಮಿತಿ 12 ತಿಂಗಳುಗಳು ಆಗಿರುತ್ತದೆ. ಮುಂದುವರೆದು, ಅಂದಾಜು ಮೊತ್ತ ರೂ.1500.00 ಲಕ್ಷಗಳಲ್ಲಿ ರೂ.300.00 ಲಕ್ಷಗಳಿಗೆ ಎಸ್‌ಎಸ್‌ಎಂ ಶಾಲೆ ಎದುರು ವಿವಿದೋದ್ಧೇಶ ಕಛೇರಿ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಪ್ಯಾಕೇಜ್-4ರ ಸದರಿ ಕಾಮಗಾರಿಗಾಗಿ ಗುತ್ತಿಗೆಯನ್ನು ಶ್ರೀ ಪೋಲವಾರ್ ಗೋಪಾಲ್ ಕೃಷ್ಣ, ನ್ಯೂ ಬಿಇಎಲ್ ರಸ್ತೆ, ಆರ್.ಎಂ.ವಿ. 2ನೇ ಹಂತ, ಬೆಂಗಳೂರು ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಮಿತಿ 12 ತಿಂಗಳುಗಳು ಆಗಿರುತ್ತದೆ.

ಇ	ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ (ವಿವರವನ್ನು ಒದಗಿಸುವುದು)	ಪ್ರಸ್ತುತ ಪ್ಯಾಕೇಜ್–6 ರಲ್ಲಿರುವ ವಿವಿದೋದ್ದೇಶ ಕಛೇರಿ ಕಟ್ಟಡಗಳ ಪಾಯದ ಕಾಮಗಾರಿಯು ಪೂರ್ಣಗೊಂಡಿದ್ದು, ಪ್ಲಿಂತ್ ಹಂತದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಪ್ಯಾಕೇಜ್ 4 ರಲ್ಲಿರುವ ಕ್ರೀಡಾ ಸಂಕೀರ್ಣ ಹಾಗೂ ಆಟದ ಮೈದಾನ ಅಭಿವೃದ್ಧಿ ಪಡಿಸುವ ಕಾಮಗಾರಿಯಲ್ಲಿ ತಳಪಾಯದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ನಅಇ 230 ಎಂಎನ್‌ವೈ 2021 (ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ